ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
DEPARTMENT OF INFORMATION AND PUBLIC RELATIONS

# Corona Warriors

## ಮಾಡಬೇಕಾದದ್ದು

1. ಗುಂಪಿನಲ್ಲಿ ಕೇವಲ ಸಂಬಂಧಿಸಿದ ಜಿಲ್ಲೆ/ ತಾಲ್ಲೂಕಿನ ಸುದ್ದಿ, ವದಂತಿ ಹಾಗೂ ವಿದ್ಯಮಾನಗಳ ಬಗ್ಗೆ ಸಂದೇಶಗಳನ್ನು ಹಂಚಿಕೊಳ್ಳಬೇಕು.

2. ಕ್ಷೇತ್ರದಲ್ಲಿ ಸಾರ್ವಜನಿಕರು,  ಪೊಲೀಸ್ ಹಾಗೂ ಆರೋಗ್ಯ ಅಧಿಕಾರಿ/ಸಿಬ್ಬಂದಿಗಳೊಂದಿಗೆ ಯಾವುದೇ ಸಮಸ್ಯೆ ಎದುರಾದಾಗ ಕೂಡಲೇ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿಯನ್ನು ಸಂಪರ್ಕಿಸಿ ಸಹಾಯ ಪಡೆಯಬೇಕು.

3. ಸ್ವಯಂ ಸೇವಕರು ಕೊರೋನಾ ಸೋಂಕು ತಗುಲುವುದನ್ನು ತಡೆಯಲು ಅಯೋಜಕರು ತಿಳಿಸಿರುವ ಎಲ್ಲ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು. ತಮ್ಮ ಸ್ವಂತ ಶುಚಿತ್ವವನ್ನು ಕಾಪಾಡಿಕೊಳ್ಳಬೇಕು.

## ಮಾಡಬಾರದ್ದು

1.ಕೊರೋನಾ ಸಂವಹನ ಗುಂಪುಗಳಲ್ಲಿ ಅನಗತ್ಯ ಅಥವಾ ವ್ಯಾಪ್ತಿ ಮೀರಿದ ಸಂದೇಶಗಳು ಹಾಗೂ ಫಾರ್ವರ್ಡ್ ಗಳನ್ನು ಕಳುಹಿಸುವುದನ್ನು ನಿಷೇಧಿಸಿದೆ.

2. ಗುಂಪಿನಲ್ಲಿ ನಡೆಸಲಾಗುವ ಚರ್ಚೆ ಹಾಗೂ ಇತರೆ ಮಾಹಿತಿಯನ್ನು ಆಯೋಜಕರನ್ನು ಹೊರತುಪಡಿಸಿ ಬೇರೆ ಅವರೊಂದಿಗೆ ಹಂಚಿಕೊಳ್ಳುವಂತಿಲ್ಲ.

3. ಆಯೋಜಕರ ಗಮನಕ್ಕೆ ತರದೇ ಅಥವಾ ಅವರ ಅನುಮತಿ ಇಲ್ಲದೇ ಸ್ವಯಂ ಸೇವಕರು ಯಾವುದೇ ಪ್ರಕರಣವನ್ನು ಸ್ವತಂತ್ರವಾಗಿ ನಿರ್ವಹಿಸುವಂತಿಲ್ಲ.

4. ಇಲಾಖೆಯಿಂದ ನೀಡಲಾಗಿರುವ ಗುರುತಿನ ಚೀಟಿಯನ್ನು ನಿಯೋಜಿತ ಕಾರ್ಯವನ್ನು ಹೊರತುಪಡಿಸಿ ಸ್ವಯಂ ಸೇವಕರು ಇನ್ನಾವುದೇ ಇತರೆ ಉದ್ದೇಶಕ್ಕೆ ಬಳಸಿಕೊಳ್ಳುವಂತಿಲ್ಲ.

5. ತಮಗೆ ನಿಯೋಜಿಸಲಾದ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿ ಇದ್ದಲ್ಲಿ, ಅಯೋಜಕರ ಗಮನಕ್ಕೆ ತರಬೇಕು. ಸ್ವತಂತ್ರವಾಗಿ ಮತ್ತೊಬ್ಬರನ್ನು ನಿಯೋಜಿಸುವಂತಿಲ್ಲ ಹಾಗೂ ವರದಿ ಸಲ್ಲಿಸುವಂತಿಲ್ಲ